# ಧ್ವನಿ ಬದಲಾವಣೆ ಮತ್ತು ಆರ್ಥಿಕ ತತ್ವ.
## (ಉತ್ತರ ಕರ್ನಾಟಕ ಜಿಲ್ಲೆಗಳನ್ನು ಅನುಲಕ್ಷಿಸಿ)

**ಆಯ್. ಬಿ. ಸಾತಿಹಾಳ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನವಲಗುಂದ, ಧಾರವಾಡ.

**Article Link: https://aksharasurya.com/2023/11/i-b-satihal/**

## ABSTRACT:

ಕರ್ನಾಟಕದಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನು ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಕನ್ನಡವನ್ನು ಧ್ವನಿ ವ್ಯತ್ಯಾಸಗಳ ಆಧಾರದ ಮೇಲೆ ಪ್ರಾದೇಶಿಕ ಉಪಭಾಷೆ ಎಂದು ಗುರುತಿಸುವ ಪದ್ಧತಿ ಸಾವಿರ ವರ್ಷಗಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಕವಿರಾಜ ಮಾರ್ಗಕಾರನ ಕಾಲದಲ್ಲಿಯೆ ಕರ್ನಾಟಕದಲ್ಲಿ ಹಲವು ಕನ್ನಡಗಳಿದ್ದವು. ಇಂದಿನಂತೆ ಅಂದೂ ಆಯಾ ಕನ್ನಡ ಪ್ರದೇಶಗಳ ಮೇಲೆ ಅನ್ಯ ಭಾಷೆಗಳ ಪ್ರಭಾವವಿತ್ತು. ಅವರು ಉಚ್ಚ–ರಿಸುವ ಧ್ವನಿಗಳಲ್ಲಿ ವ್ಯತ್ಯಾಸವಿದ್ದರೂ ಅವು ಪರಸ್ಪರರಿಗೆ ಅರ್ಥವಾಗುತ್ತಿದ್ದವು. ಅದರಲ್ಲಿ ಶುದ್ಧ (ತಿರುಳು) ಕನ್ನಡವು ಒಕ್ಕುಂದ, ಕೊಪಣನಗರ, ಪುಲಿಗೆರೆ ಮತ್ತು ಕಿಸುವಳಲು ಪ್ರದೇಶಗಳಲ್ಲಿ ಬಳಕೆಯಲ್ಲಿತ್ತು. ಇವುಗಳಲ್ಲಿ ಕನ್ನಡ ಸಾಹಿತ್ಯ ರಚನೆಗೆ ಈ ತಿರುಳುಗನ್ನಡವೆ ಸೂಕ್ತವಾಗಿತ್ತು ಎಂದು ಹೇಳಿದ್ದಾನೆ. ಮುಂಬರುವ ನಯಸೇನ ಮತ್ತು ಚಂದ್ರರಾಜರು (12ನೇ ಶತಮಾನ) ತಮ್ಮ ಕಾವ್ಯಗಳ ಭಾಷೆ ಪೊಸಗನ್ನಡವೆಂದು ಹೇಳಿದರೆ ಆಂಡಯ್ಯನು (13ನೆಯ ಶತಮಾನ) ತನ್ನ ಕಾವ್ಯದ ಭಾಷೆಯನ್ನು ಅಚ್ಚಗನ್ನಡವೆಂದು ಕರೆದಿದ್ದಾನೆ. ಹೀಗೆ ಕ್ರಿ.ಶ 9 ರಿಂದಕ್ರಿ.ಶ 13 ರ ವರೆಗಿನ ನಾಲ್ಕು ಶತಮಾನಗಳ ಅವಧಿಯಲ್ಲಿ ಹಳೆಗನ್ನಡ, ತಿರುಳುಗನ್ನಡ, ಹೊಸಗನ್ನಡ ಮತ್ತು ಅಚ್ಚಗನ್ನಡ ಎಂಬ ನಾಲ್ಕು ಅವಸ್ಥಾಭೇಧಗಳ ಮಾತುಗಳು ಬಂದು ಹೋಗಿವೆ.

## KEY WORDS:

ನಿಲ್ದ್ರಿ, ನಾನ್‌ಸುನೆ, ಗೂಳೆ, ಖರ್ರಾಬ, ಮಗ್ಗಾ, ಕಂವಾ, ಅಡ್ಡೆಲ್ಲ, ಕಾಲ್ಮರ್ಲೆ.

ಕನಾಟಕದಲ್ಲಿ ನೈಸರ್ಗಿಕವಾಗಿ ಸಮೃದ್ಧವಾಗಿರುವ ಜಿಲ್ಲೆಗಳೊಂದಿಗೆ ಬಯಲು ಸೀಮೆಯ ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಪ್ರದೇಶಗಳನ್ನು ತೌಲನಿಕವಾಗಿ

ವಿಶ್ಲೇಷಿಸುವುದು. ಕನ್ನಡ ನುಡಿಯಲ್ಲಿ ಬಳಕೆಯಲ್ಲಿ ಕಂಡು ಬರುವ ಭಾಷಿಕ (ಧ್ವನಿ) ವ್ಯತ್ಯಾಸಕ್ಕೆ ವಿಶಾಲ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಮೃದ್ಧಿ ಮತ್ತು ಉದ್ಯೋಗಾವಕಾಶಗಳಲ್ಲಿಯ ತಾರತಮ್ಯ, ಅಲ್ಲದೆ ಬರಗಾಲ ಪೀಡಿತ ಪ್ರದೇಶಗಳೆಂದು ಪರಿಗಣಿಸಲಾಗುವ ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿಯ ಜನರನ್ನು ಭಾಷಿಕವಾಗಿ ಹೋಲಿಸಿ ಆ ಮೂಲಕ ಧ್ವನಿ ವ್ಯತ್ಯಾಸಕ್ಕೆ ಆರ್ಥಿಕತೆ ಹೇಗೆ ಕಾರಣವಾಗಿದೆ ಎನ್ನುವುದನ್ನು ತೌಲನಿಕವಾಗಿ ಅನುಲಕ್ಷಿಸುವುದು.

ಕನ್ನಡ ಭಾಷೆಯನ್ನು ನಾಲ್ಕು ಪ್ರಾದೇಶಿಕ ಭಾಷೆಗಳನ್ನಾಗಿ ವಿಂಗಡಿಸಿದಂತೆ ಪರಿಸರಾತ್ಮಕವಾಗಿ ಮತ್ತು ಆರ್ಥಿಕ ಅವಕಾಶಗಳ ಹಿನ್ನಲೆಯಲ್ಲಿ ವಿಂಗಡಿಸಬಹುದು ಎನ್ನುವ ಅಂಶವನ್ನು ಭಾಷಾ ವಿದ್ವಾಂಸರ ಆವಹಗಾನೆಗೆ ತಂದು ಅವರಿಂದ ಬರುವ ಅಭಿಪ್ರಾಯಗಳನ್ನು ಸ್ವೀಕರಿಸಿ ಈ ಕುರಿತ ಅಧ್ಯಯನ ಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸುವುದು.

ಪೂರ್ವಯೋಜನೆ ಇಲ್ಲದೆ ನಡೆಯುವ ಭಾಷಿಕ ಬದಲಾವಣೆ ಕ್ರಿಯೆಯ ಹಿಂದಿನ ಉದ್ದೇಶ ಆಯಾ ಭಾಷೆಗಳನ್ನು ಆಡುವವರ ಸೌಲಭ್ಯ ಮತ್ತು ಸೌಕರ್ಯಗಳ ಕಾರಣವನ್ನು ಅವಲಂಭಿಸಿರುತ್ತದೆ. ಸಾಮಾಜಿಕರಿಗೆ ತಾನು ಸುಲಭ ಸಂಪರ್ಕದ ಸಾಧನ ಆಗಬೇಕು ಎನ್ನುವುದು ಪ್ರತಿಯೊಂದು ಭಾಷೆಯ ಅಘೋಷಿತ ಗುರಿ. ಇದರ ಮೊದಲ ಹೆಜ್ಜೆ ಧ್ವನಿ ಬದಲಾವಣೆ. ಇದು ಮುಂದೆ ಧ್ವನಿಮಾ ಹಂತವನ್ನು ತಲುಪಿ ಆಕೃತಿಮಾಗಳನ್ನು ಆವರಿಸಿ ವಾಕ್ಯದ ಉದ್ದಕ್ಕೂ ವಿಸ್ತರಿಸಿ ಕಾಲಾಂತರದಲ್ಲಿ ಹೊಸ ಭಾಷೆಯ ಉಗಮಕ್ಕೆ ಕಾರಣವಾಗುತ್ತದೆ. ಜಗತ್ತಿನ ಭಾಷೆಗಳಿಗೆಲ್ಲ ಕಾರಣವಾದ ಮಾತೃ ಭಾಷೆಗಳು ಸಂಖ್ಯೆ ಬರೀ ಏಳು. ಇಂದು ಏಳು ಸಾವಿರಕ್ಕೂಅಧಿಕ ಭಾಷೆಗಳಾಗಿರುವುದನ್ನು ನಾವು ಗಮನಿಸಿದ್ದೇವೆ.

ಒಬ್ಬ ವ್ಯಕ್ತಿ ಒಂದು ಶಬ್ದವನ್ನು ಉಚ್ಚರಿಸಿದ ರೀತಿಯಲ್ಲಿ ಮತ್ತೊಬ್ಬ ವ್ಯಕ್ತಿ ಉಚ್ಚರಿಸುವುದಿಲ್ಲ. ಇದು ಕಡಿಮೆ ಅಂತರ ಎನಿಸಿದರೂ ಒಬ್ಬರು ಉಚ್ಚರಿಸಿದಂತೆ ಮತ್ತೊಬ್ಬರು ಉಚ್ಚರಿಸಲು ಸಾಧ್ಯವಿಲ್ಲ. ಈ ಶಬ್ದೋಚ್ಚಾರಭೆಯ ಭೇದವು ಭಾಷಾ ಭಿನ್ನತೆಗೆ ಎಡೆಮಾಡಿಕೊಡುತ್ತದೆ.

ಯಾದೃಚ್ಛಿಕತೆಯು ಯಾವಾಗಲೂ ಸೌಲಭ್ಯಕಾಂಕ್ಷಿ ಆಗಿರುತ್ತದೆ. ಇದು ಪ್ರತಿ ಸಂದರ್ಭದಲ್ಲೂ ಸಾಧಿಸುವುದು ಸಮಯದ ಉಳಿತಾಯವನ್ನೇ. ಈ ಸಮಯದ ಉಳಿಕೆಯು ಆಯಾ ಪರಿಸರದ ಮತ್ತು ಪ್ರದೇಶದ ಜನರಿಂದ ದಾಖಲೆ ರಹಿತ ಕರಾರಿನ ಪತ್ರ ಪಡೆದಂತೆ ನಿಷ್ಠೆಯಿಂದ ತನ್ನ ಕ್ರಿಯೆಯನ್ನು ನಿಭಾಯಿಸಿಕೊಂಡು ಹೋಗುತ್ತದೆ. ಮತ್ತು ತನ್ನ ಶಕ್ತ್ಯಾನುಸಾರ ಭಾಷಿಕ ಬದಲಾವಣೆ (ಧ್ವನಿ) ಪ್ರಕ್ರಿಯೆಯನ್ನು

ಸಾಂಗವಾಗಿ ಮುನ್ನಡೆಸುತ್ತದೆ. ಈ ಬದಲಾವಣೆಯ ಮೊದಲ ಹಂತದ ಬೇಟೆ ಪದಾಂತ್ಯಧ್ವನಿ (ಮನಿ, ಆನಿ, ಸಾಲಿ, ಹೊಳಿ, ಹೋಳಗಿ). ಮುಂದಿನ ಹಂತ ಪದ ಪರಿವರ್ತನೆ (ಬರಾಕೊ, ಬತ್ತೇವಿ, ಬರಾಮಿ, ಬರೂನಾ, ಬರ್ರ‍್ರವ್ರ = ಬರುತ್ತೇವೆ, ಬರುವೆವು.) ತದನಂತರದಲ್ಲಿ ಶೀಘ್ರವಾಕ್ಯ ರಚನೆ (ನಿಲ್ರಿ ನಾಭಿ ನಿಮ್ಗೂಡ ಬತ್ತ್ಯಾ, ನಾನ್‌ಸುನೆ ನಿಮ್ಗೂಡ ಬರಾಂವದಿನಿ ನಿಂದಿರ್ರೀ, ನಿಂದ್ರಿ ನನ್ಗೂ ಕರಕೊಂಡ ಕಿಸಿಂದ್ರೆ ಹೊಗ್ರಿ (ನಿಲ್ಲಿರಿ ನಾನು ಬರುತ್ತೇನೆ. ನನ್ನನ್ನು ನಿಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿರಿ). ಅಂತಿಮ ಹಂತ ಹೊಸ ಭಾಷೆಯೊಂದರ ಜನನ.

ಕರ್ನಾಟಕದಲ್ಲಿ ಕನ್ನಡ ಭಾಷೆಯ ಉಚ್ಚಾರಣೆಯ ವಿಭಿನ್ನತೆಯ ಆಧಾರದ ಮೇಲೆ ಪ್ರಾದೇಶಿಕವಾಗಿ ನಾಲ್ಕು ಉಪಭಾಷೆಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ: ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಮತ್ತು ಗುಲ್ಬರ್ಗಾ ಕನ್ನಡ ಎಂದು. ಹತ್ತನೆಯ ಶತಮಾನದ ಕಾವ್ಯಗಳಿಗೆ ತಿರುಳುಗನ್ನಡವು ಕಾವ್ಯ ಭಾಷೆಯಾಗಿದ್ದಂತೆ ಇಂದು ಮಂಗಳೂರು ಕನ್ನಡವು ಗ್ರಂಥಸ್ಥ ಕನ್ನಡ ಭಾಷೆಯಾಗಿದೆ.

ಮೈಸೂರು, ಮಂಗಳೂರು, ಧಾರವಾಡ ಮತ್ತು ಗುಲ್ಬರ್ಗಾ ಇವು ಕರ್ನಾಟಕದ ನಾಲ್ಕು ಮಗ್ಗಲುಗಳಲ್ಲಿರುವ ಜಿಲ್ಲೆಗಳು. ಈ ಎಲ್ಲ ಜಿಲ್ಲೆಗಳ ವ್ಯವಹಾರಿಕ ಭಾಷೆ ಕನ್ನಡವೇ, ಆದರೂ ಅದು ಪ್ರಾದೇಶಿಕವಾಗಿ ಹಲವಾರು ವ್ಯತ್ಯಾಸಗಳನ್ನು ಹೊಂದಿ ಆಯಾ ಪ್ರಾದೇಶಿಕ ಕನ್ನಡ ಎನ್ನುವ ಹೆಸರನ್ನು ಪಡೆದುಕೊಂಡಿದೆ. ಈ ನಾಲ್ಕು ಪ್ರಾದೇಶಿಕ ಭಾಷೆಯ ಕನ್ನಡಗಳಿಗೆ ತನ್ನದೇ ಆದ ಧ್ವನಿ, ಧ್ವನಿಮಾ, ಅರ್ಥ ಮತ್ತು ವಾಕ್ಯ ವ್ಯವಸ್ಥೆ ಹಾಗೂ ವಿಶಿಷ್ಟಪದಗಳ ರಚನೆಗಳಿವೆ. ಹೀಗಾಗಿ ಆಯಾ ಪ್ರಾದೇಶಿಕ ಭಾಷೆಗಳಲ್ಲಿ ವ್ಯವಹರಿಸುವ ಕೆಲವು ಕನ್ನಡ ಪದಗಳು ಇತರ ಕನ್ನಡಿಗರಿಗೆ ಅರ್ಥವಾಗುವುದು ಕಠಿಣ. ಈ ಕಠಿಣತೆಯು ಇಂದಿಗಿಂತಲೂ ಹಿಂದೆ ಕ್ಲಿಷ್ಟವಾಗಿತ್ತು. ಆ ಕ್ಲಿಷ್ಟತೆಯು ಇಂದು ಕಡಿಮೆಯಾಗಲು ಕಾರಣ ಸಾರಿಗೆ, ದೂರವಾಣಿ ಮತ್ತು ಉದ್ಯೋಗ ಮೊದಲಾದ ಸೌಕರ್ಯಗಳಿಂದ. ಈ ನಾಲ್ಕು ಪ್ರದೇಶವಾಸಿಗಳ ಭಾಷೆಯಲ್ಲಿ ವ್ಯತ್ಯಾಸಕ್ಕೆ ಕಾರಣ ಮೊದಲನೆಯದು ಪ್ರಾದೇಶಿಕ ಅಂತರವಾದರೆ, ಎರಡನೆಯದು ಅನ್ಯಭಾಷೆಗಳ ಸಂಪರ್ಕ ಎನ್ನುವ ಕಾಣಗಳನ್ನು ಕೊಡುತ್ತ ಬಂದಿರುವುದು ಹಳೆಯ ವಿಚಾರ. ಪ್ರಸ್ತುತ ಲೇಖನದಲ್ಲಿ ‘ಆರ್ಥಿಕತೆಯೂ ಒಂದು ಕಾರಣವಾಗಿದೆ’ ಎನ್ನುವ ಅಂಶದತ್ತ ವಿದ್ವಾಂಸರ ಗಮನವನ್ನು ಸೆಳೆಯುವುದು ಈ ಲೇಖನದ ಉದ್ದೇಶವಾಗಿದೆ.

“ಭಾಷೆ. ಅದು ಬಳಸುವ ವ್ಯಕ್ತಿಯ ದೈಹಿಕ ಸ್ಥಿತಿಯನ್ನು ಅವಲಂಭಿಸಿರುತ್ತದೆ.” ಎಂಬ ವಿಚಾರವನ್ನು ತಾವು ಒಪ್ಪಿಕೊಳ್ಳುವುದಾದರೆ; ಪ್ರಸ್ತುತ ಲೇಖನದ ಉದ್ದೇಶವು

ಸ್ಪಷ್ಟವಾಗುವುದೆಂದು ನನ್ನ ಅನಿಸಿಕೆ.

ದಕ್ಷಿಣ ಕರ್ನಾಟಕದಲ್ಲಿ ಬರುವ ಮಂಗಳೂರು, ಮೈಸೂರು ಪ್ರದೇಶಗಳು ನೈಸರ್ಗಿಕವಾಗಿ ಸಂಪದ್ಭರಿತವಾದ ಪ್ರದೇಶಗಳಾಗಿದ್ದರಿಂದ ಅಲ್ಲಿಯ ಜನಗಳಿಗೆ ವರ್ಷಪೂರ್ತಿ ಕೆಲಸಗಳು, ಅನುಕೂಲತೆಗಳು ಹೆಚ್ಚು. ಅಲ್ಲದೆ ಮತ್ತೊಬ್ಬರ ಮೇಲೆ ಪರಾವಲಂಭಿಗಳಾಗುವುದು ಉತ್ತರ ಕರ್ನಾಟಕದ ಜನರಿಗಿಂತ ವಿರಳವೆಂದು ಹೇಳಬಹುದು. ಹಾಗಾಗಿ ಅಲ್ಲಿಯ ಜನರ ನಡುವೆ ಕೂಡಿಕೊಳ್ಳುವ ಸಂದರ್ಭಗಳು ವಿರಳ. ಇದರಿಂದಾಗಿ ಭಾಷೆಯಲ್ಲಿ ಹೆಚ್ಚು ಬದಲಾವಣೆಗಳಾಗುವುದಿಲ್ಲ. ಈ ಕಾರಣ–ಕ್ಕಾಗಿಯೆ ಈ ಪ್ರದೇಶದಲ್ಲಿ ಪೂರ್ವದ ಹಳೆಗನ್ನಡದ ರೂಪಗಳು ಉಳಿದುಕೊಂಡು ಬಂದಿರುವುದನ್ನು ಇಂದಿಗೂ ಸಹ ನಾವು ಕಾಣಬಹುದಾಗಿದೆ. ಆದರೆ ಉತ್ತರ ಕರ್ನಾಟಕದ ವಿಜಯಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಪ್ರದೇಶಗಳು ಬಹುತೇಕ ಬಯಲು ಸೀಮೆಗಳಾಗಿದ್ದು ಇಲ್ಲಿಯ ಜನರು ವರ್ಷದಲ್ಲಿ ಸರಿಸುಮಾರು ಏಳೆಂಟು ತಿಂಗಳು ಅರೆ ಉದ್ಯೋಗಿಗಳಾಗಿರುತ್ತಾರೆ. ಕೆಲಸವಿಲ್ಲದ ಆ ದಿನಗಳಲ್ಲಿ ಸಶಕ್ತರು ನೆರೆಯ ರಾಜ್ಯಗಳಿಗೆ ಗೂಳೆ(ವಲಸೆ) ಹೋಗುತ್ತಾರೆ. ಇನ್ನುಳಿದವರು ದಿನದ ಹೆಚ್ಚು ಸಮಯವನ್ನು ದೇವಸ್ಥಾನದ ಕಟ್ಟೆ, ಧರ್ಮಶಾಲೆ, ಸಮಾಜ ಮಂದಿರ, ಸಮುದಾಯ ಭವನಗಳನ್ನು ಆಶ್ರಯಿಸಿರುತ್ತಾರೆ. ಹಾಗಾಗಿ ಇವರ ನಡುವೆ ಸಹಜವಾಗಿಯೆ ಸಲುಗೆಯು ಬೆಳೆದು ಬಿಡುತ್ತದೆ. ಈ ಸಲುಗೆಯಿಂದಾಗಿ ಭಾಷೆ ತೀರ ಹಗುರವಾಗುತ್ತದೆ. ಅಲ್ಲದೆ ತನ್ನ ಗಾಂಭೀರ್ಯವನ್ನು ಕಳೆದುಕೊಂಡು ಮಡಿ–ಮೈಲಿಗೆ ರಹಿತವಾದ ಪದಗಳು ಆತ್ಮೀಯ ಸಂಭಾಷಣೆಗಳಂತೆ ಬಳಕೆಯಲ್ಲಿ ಬಂದು ರೂಢಿಗತವಾಗುತ್ತವೆ.

**ಉದಾ:**

**'ಅಂವಾ ಬಾಳ ಚೊಲೊ ಸೂಳೆಮಗ ಅದಾನ ಯ್ಯಾರರ ಎನ್ರ ಕೆಳ್ಯಾಕ ವ್ಹೋದ್ರ ಇಲ್ಲಾನಂಗಿಲ್ಲಿ.'**

**'ಏನಮಾಡಕತ್ತಿಲೇಯಪ್ಪ ಬೋಳಿಮಗ್ನ?'**

**'ಊಟ ಆಯ್ತೆನ್ಲೆ ಸೂಳೆಮಗ್ನ?'**

**'ಇಸ್ಮಾಕೀಕಿತ್ನಾ ಅಚ್ಚಾ ಆದ್ಮಿ ಹೈರೆವುನೆ.'**

**'ಬಾರೋ ರಾಂಡ್ಕೆ'**

**'ತೈಲಿ ಖರ್‍ಾಬ ಮಾಡಬ್ಯಾಡ್ಲೆ ದೌಡ ಬಾರ್ಲೇರಾಂಡ್ಕೆ.'**

**'ಮೆತ್ಲೆ ಬಡ್ದನಂದ್ರ ಗೊತ್ತಾಗತೈತಿ ಮಗ್ನಾ ನಿನ್ಗ.'**

...ಇವೆ ಮೊಲಾದ ವಾಕ್ಯಗಳು ಈ ಭಾಗದ ಜನರ ಭಾಷಾ ನೈರ್ಮಲ್ಯತೆಯ ಪ್ರತೀಕಗಳಾಗಿವೆ. ಇಂತಹ ಸಹಸ್ರನಾಮಗಳಲ್ಲಿ ಒಂದೇ ಒಂದನ್ನು ದಕ್ಷಿಣ ಕರ್ನಾಟಕದ ಜನರಿಗೆ ಹೇಳಿದರೆ; ಅವರು ಅದನ್ನು ಸಂಶೋಧನಾತ್ಮಕವಾಗಿ ನೋಡಿ

ಮರುಗುವುದರಲ್ಲಿ ಸಂಶಯವಿಲ್ಲ. ಅದಕ್ಕೆಂದೆ ಅವರು ಈ ಉತ್ತರ ಕರ್ನಾಟಕವನ್ನು 'ಗಂಡು ಮೆಟ್ಟಿನ ನೆಲ'ವೆಂದು ಹೇಳಿರಬಹುದು ಎನ್ನುವುದು ನನ್ನ ಅನಿಸಿಕೆ.* ಹೀಗೆ ಭಾಷೆಯ ನಿರ್ಮೈಲಿಗೆಗೆ ಅರೆ ಉದ್ಯೋಗದಿಂದ ಒದಗುವ ಆರ್ಥಿಕ ಅಸಮಾನತೆಯ ಕಾರಣವು ಒಂದಾದರೆ; ಅನಾವೃಷ್ಠಿ ಮತ್ತು ಅತಿಯಾದ ಬಿಸಿಲೂ ಮತ್ತೊಂದು ಪ್ರಮುಖ ಕಾರಣವಾಗಿದೆ.

ಅನಾವೃಷ್ಠಿ, ಫಲವತ್ತಲ್ಲದ ಭೂಮಿ ಮತ್ತು 40 ರಿಂದ45 ಡಿಗ್ರಿ ಸೆಲ್ಸಿಯಸ್ ಆಸು ಪಾಸಿನಲ್ಲಿ ಉರಿವ ಬಿಸಿಲು, ಪರಂಪರಾಗತವಾಗಿ ಬಂದ ಶ್ರಮದಾಯಕ ಕೃಷಿ ಉದ್ಯೋಗ, ಪರ್ಯಾಯ ಉದ್ಯೋಗಾವಕಾಶಗಳ ಕೊರತೆ ಮೊದಲಾದವುಗಳು ಈ ಬಯಲು ಸೀಮೆಯ ಜನತೆಯನ್ನು ತುಷ್ಠಿ ್ರರೇಖೆಯಿಂದ ಕೆಳಗಿರಿಸಿವೆ. ಯಾವಾಗಲೂ ಆರ್ಥಿಕ ಕೊರತೆಯನ್ನು ಅನುಭವಿಸುತ್ತ ಬಂದ ಈ ಪರಿಶ್ರಮ ಜೀವಿಗಳಲ್ಲಿ ಸಹಜವಾಗಿಯೇ ಅತೃಪ್ತತೆಯ ಛಾಯೆ ಇದೆ. ಆ ಛಾಯೆ ಇವರು ಬಳಸುವ ಭಾಷೆಯಲ್ಲಿ ಪ್ರತಿಫಲಿತವಾಗಿರುವದನ್ನು ಕೆಲವು ಉದಾಹರಣೆಗಳಿಂದ ಗಮನಿಸಬಹುದಾಗಿದೆ.

**'ಎಲ್ಯೋಯ್ತೀ ನಾಬಿ ಬತ್ತ್ಯಾ'**
**'ಹೊಲ್ಕಹೊಕಿಸಿಂದ್ರೆ ಬುತ್ತಿಕೊಟ್ಟಾ'**
**'ಕೊಕಲ್ಲಿ ನಿಂತಾನ್ಲಾ ಕಂವಾ ನಿನ್ಗ ಖೂನದಾನೇನ?'**
**'ಮನ್ಯಾಗಕುಂತೇನ ಕಿಸಿತ್ಲೇ ಗಂಡ್ಸ್ರಂಗ ಹೊರ್ಗಬಂದು ಮಾತ್ಯಾಡ್'**
**'ಹತ್ಥೌಬಡಾಬಡಾಧಂ ಹಿಡ್ದ ಹಂತ್ಯಾಕಇದೇನೆ ನಿಮ್ಮನಿ ಗಾಡಿಮಾಯ್ತೆನ?'**
**'ನ್ಯಾರೀ ಮಾಡ್ಕೆಸಿ ಹೋಗ್ರಿ ಬಳತ್ತಾಗಂಗಿಲ್ಲ ಅಡ್ಗೆಲ್ಲ ತೈಯ್ಯಾರೈತ್ರಿ'**
**'ನಾಂವೂ ದೇವ್ರಪ್ರಸಾದ್'ಉಣ್ಣಾಕ್ ಹೊಂಕೇವಿ'**
**'ಕೈಕಾಲ್ಮಾರೀ ತಕ್ಕೋಳ್ಳಾಕ ನೀರ್'ಕೊಟ್ಟೇನಿಲ್, ಕಾಲ್ಮರ್ಲೆ ಹೊಡ್ಲ್ಯಾ?'**

ಇವೇ ಮೊದಲಾದ ವಾಕ್ಯಗಳಲ್ಲಿ ಅವಸರದ ಭಾವ ಎದ್ದುತೋರುತ್ತದೆ.*

ಹೀಗೆ ಒಂದು ಭಾಷೆಯ (ಕನ್ನಡ) ನಡುವೆ ಇರುವ ಧ್ವನಿ ಉಚ್ಚಾರಣಾ ವ್ಯತ್ಯಾಸಗಳನ್ನು ಆ ಭಾಷೆಯನ್ನು ಆಡುವವರ ಆರ್ಥಿಕ ಹಿನ್ನಲೆಯಲ್ಲಿ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು ಭಾಷೆಯ ಇತರ ಶಿಸ್ತೀಯ ಅಧ್ಯಯನದಷ್ಟೇ ಅವಶ್ಯವಾಗಿದೆ.

ಬದಲಾವಣೆ ಭಾಷೆಯ ಜೀವಂತಿಕೆಯ ಲಕ್ಷಣ. ಅದನ್ನು ಹರಿಯುವ ಪ್ರವಾಹಕ್ಕೆ ಹೋಲಿಸುತ್ತಾರೆ. ಪ್ರವಾಹದಿಂದ ನದಿಯ ನೀರು ಬದಲಾದಂತೆ ಭಾಷೆಯೂ ಬದಲಾಗುತ್ತದೆ. ಅವುಗಳಲ್ಲಿ ಸಂಪರ್ಕ ಮಾಧ್ಯಮಗಳ ಸೌಕರ್ಯ, ಅನ್ಯಭಾಷೆಗಳ ಪ್ರಭಾವ ಇವು ಪ್ರಮುಖ ಕಾರಣಗಳು ಎಂದು ಹೇಳಲಾಗುತ್ತದೆ.

ಈ ಪ್ರಮುಖ ಕಾರಣಗಳ ಪಟ್ಟಿಗೆ ಆರ್ಥಿಕಸ್ಥಿತಿಯನ್ನು ಸೇರಿಸಿ, ಆ ಹಿನ್ನಲೆಯಲ್ಲಿ ಸಂಶೋಧನೆಯನ್ನು ಕೈಕೊಂಡಲ್ಲಿ ಕನ್ನಡ ಪ್ರಾದೇಶಿಕ ಉಪ ಭಾಷಾ ಅಧ್ಯಯನ ಕಾರ್ಯವು ಪರಿಪೂರ್ಣವಾಗುತ್ತದೆ. ಈ ರೀತಿಯ ಅಧ್ಯಯನ ಕ್ರಮವನ್ನು ಇತರ ಭಾಷೆಗಳಿಗೆ ಅನ್ವಯಿಸಿ ಸಂಶೋಧನೆ ಕೈಗೊಂಡಲ್ಲಿ ಹಲವು ಸಕಾರಾತ್ಮಕ ಫಲಿತಗಳನ್ನು ಪಡೆದಿಕೊಳ್ಳಬಹುದಾಗಿದೆ. ಆ ಮೂಲಕ ಭಾಷಿಕ ಬದಲಾವಣೆಯ ಇತರ ತಂತ್ರಗಳ ಜೊತೆಗೆ 'ಭಾಷಾ ಆರ್ಥಿಕ ಸಿದ್ಧಾಂತ' ಎಂಬ ಹೊಸ ಅಧ್ಯಯನ ಕ್ಷೇತ್ರವನ್ನು ವಿಸ್ತರಿಸಿ 'ಧ್ವನಿ ಬದಲಾವಣೆ' ಕುರಿತಾದ ಸಂಶೋಧನಾ ಕಾರ್ಯವನ್ನು ಈ ಕ್ಷೇತ್ರದ ಅಡಿಯಲ್ಲಿ ಕೈಕೊಳ್ಳುವುದರಿಂದ ಹಲವು ಸತ್ಯಗಳನ್ನು ಅನಾವರಣಗೊಳಿಸಬಹುದಾಗಿದೆ.

* **ಮೈ ನೋವಾಗದ ಕೆಲಸಕ್ಕೆ ಕೈ ತುಂಬಾ ಸಂಪಾದನೆ ಮಾಡಿ, ಹೊಟ್ಟೆ ಪೂರ್ತಿ ಊಟಮಾಡಿ, ತಂಪಾದ ಪರಿಸರದ ಬೆಚ್ಚನೆಯ ಮನೆಯಲ್ಲಿ ಸೊಂಪಾಗಿ ವಾಸ ಮಾಡುವ ವ್ಯಕ್ತಿಗಳು ಆಡುವ ಮಾತುಗಳು ಇಂಪಾಗಿಯೂ ಮತ್ತು ನಯವಾಗಿಯೂ ಇರುತ್ತವೆ. ಅವು ಸರಳ ಸುಂದರ ಪದಗಳ ಚಿಕ್ಕ ಚಿಕ್ಕ ವಾಕ್ಯಗಳಾಗಿರುತ್ತವೆ. ಆದರೆ; ಮೈ ತುಂಬಾ ಸಾಲ ಮಾಡಿಕೊಂಡು ಉರಿಬಿಸಿಲಿನಲ್ಲಿ ಶ್ರಮದಾಯಕ ಕೆಲಸಮಾಡಿ ತೇಗುತ್ತ ಬಂದು, ಮುರುಕಲು ಮನೆಯಲ್ಲಿ ವಿಶ್ರಮಿಸಲೂ ಜಾಗವಿಲ್ಲದೆ ಸಾರ್ವಜನಿಕ ಸ್ಥಳಗಳನ್ನು ಆಶ್ರಯಿಸಿದ ವ್ಯಕ್ತಿಗಳು ಆಡುವ ಮಾತುಗಳು ಅವರ ಜೀವನ ಶೈಲಿಯಷ್ಟೇ ಕಷ್ಟಕರವೂ, ಅದರಲ್ಲಿಯ ಪದಗಳು ಕ್ಲಿಷ್ಟಕರವೂ ಆಗಿದ್ದು, ಸಾಂದ್ರ ಪದಗಳ ಶೀಘ್ರ ವಾಕ್ಯ ಘಟಕಗಳಿಂದ ಕೂಡಿರುತ್ತವೆ.**

## ಪರಾಮರ್ಶನ ಗ್ರಂಥಗಳು:

1. ಡಿ.ಎನ್.ಶಂಕರಭಟ್ಟ. ಮಾತಿನ ಒಳಗುಟ್ಟು (2008), ಬಾಶಾ ಪ್ರಕಾಶನ, ಹೆಗ್ಗೋಡು, ಸಾಗರ.
2. ಡಿ.ಎನ್.ಶಂಕರಭಟ್ಟ. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ (2006), ಬಾಶಾ ಪ್ರಕಾಶನ, ಹೆಗ್ಗೋಡು, ಸಾಗರ.
3. ಡಿ.ಎನ್.ಶಂಕರಭಟ್ಟ. ಕನ್ನಡದ ಸರ್ವನಾಮಗಳು (2003), ಎಂ.ಎಚ್.ಆರ್.ಡಿ., ಮಾನಸಗಂಗೋತ್ರಿ, ಮೈಸೂರು.
4. ಸಂಗಮೇಶ ಸವದತ್ತಿಮಠ. ದ್ರಾವಿಡ ಭಾಷಾ ವ್ಯಾಸಂಗ (2004), ರೂಪರಶ್ಮಿ ಪ್ರಕಾಶನ, ಧಾರವಾಡ.
5. ರಾಜೇಶ್ವರಿ ಮಹೇಶ್ವರಯ್ಯ, ವರ್ಣನಾತ್ಮಕ ಭಾಷಾ ವಿಜ್ಞಾನ (1992), ಸಮಾಜ ಪುಸ್ತಕಾಲಯ, ಧಾರವಾಡ.
6. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ವ್ಯಾಕರಣ ದರ್ಪಣ (2015), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ಸಾರ್ಥಕ: ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಗ್ರಂಥ (1995), ಪ್ರೊ. ಎಂ. ಮರಿಯಪ್ಪ ಭಟ್ ಸಂಸ್ಮರಣ ಸಮಿತಿ, ಮೈಲಾಪುರ, ಮದ್ರಾಸ್.